ಮರೆಯಲ್ಲಿ ಬಚ್ಚಿಟ್ಟುಕೊಂಡ ಅಪ್ಪ, ನಮ್ಮನ್ನು ಮನೆಯಿಂದ ಓಡಿಸುವುದಕ್ಕೆ ಕಾದಿದ್ದ ಅಪ್ಪ...

ಹೇಗೋ ಕಷ್ಟಪಟ್ಟು ಓದಿ ಕಾಲೇಜು ಮೆಟ್ಟಿಲು ಹತ್ತುವಂತಾದಾಗ ಆ ಅಪ್ಪನನ್ನು ಕಾಡಿಬೇಡಿ ಹಾಸ್ಟೆಲ್ ಸೇರಿಕೊಂಡು ನಾನು ಬಚಾವಾಗಿದ್ದೆ. ಮೂವರು ತಂಗಿಯರು ಅಪ್ಪಚಿಕ್ಕಮ್ಮನ ಆಟಕ್ಕೆ ಏನು ನರಳಾಟ ನಡೆಸಿದ್ದಾರೆಯೋ ನನಗೆ ತಿಳಿಯಲೇ ಇಲ್ಲ. ಓದಿದೆ, ಓದಿದೆ, ಓದಿದೆ. ಸಮಾಜಶಾಸ್ತ್ರದಲ್ಲಿ ಎಂ.ಎ. ಮುಗಿಸಿ ಉದ್ಯೋಗಕ್ಕೆ ಸೇರಿಕೊಳ್ಳಬೇಕು ಎಂದು ಬಯಸಿದ್ದೆ. ಆದರೆ ಆ ಸಂದರ್ಭದಲ್ಲಿ ಅದೊಂದು ದಿನ ಬ್ಯಾಂಕಿಗೆ ಹೋಗಿದ್ದೆ...

''ಆಪ್ ಕಾ ಕಾಮ್ ಕರ್‌ನೇ ಮೆ ಥೋಡಾ ಟೈಮ್ ಲಗೇಗಾ...'' (ನಿಮ್ಮ ಕೆಲಸ ಮಾಡುವುದಕ್ಕೆ ಸ್ವಲ್ಪ ಸಮಯ ಬೇಕು).

ಆತ ಹಾಗೆ ಹಿಂದಿಯಲ್ಲಿ ಹೇಳಿದಾಗ ನಾನು ಕೋಪಗೊಂಡಿದ್ದೆ.

''ನನಗೆ ಬೇಗ ಆಗಬೇಕು. ಕಚೇರಿ ಕ್ಲೋಸ್ ಆಗಿಬಿಡತ್ತೆ. ಮತ್ತೆ ನಾಳೆಯವರೆಗೆ ಕಾಯಬೇಕಾಗುತ್ತೆ...''

ನಾನು ಕನ್ನಡದಲ್ಲಿಯೇ ಉತ್ತರಿಸಿದ್ದೆ. ಆತನಿಗೆ ಅದು ಅರ್ಥವಾಗಿರಲಿಲ್ಲ. ಉತ್ತರ ಭಾರತದ ಕಡೆಯಿಂದ ಹೊಸದಾಗಿ ಬಂದಿದ್ದ ವ್ಯಕ್ತಿ ಆತ. ನನಗೆ ಅರೆಬರೆ ಹಿಂದಿ ಬಂದರೂ ಕನ್ನಡದಲ್ಲಿಯೇ ಮಾತನಾಡುವುದು ನನಗೆ ಇಷ್ಟ. ಅಷ್ಟಕ್ಕೂ ಆತ ಇಲ್ಲಿಗೆ ಬಂದ ಮೇಲೆ ಕನ್ನಡವನ್ನು ಕಲಿತುಕೊಳ್ಳಬೇಕಾದುದು ಆತನ ಜವಾಬ್ದಾರಿ. ಆತನಿಗಾಗಿ ನಾನೇಕೆ ಹಿಂದಿ ಕಲಿತುಕೊಳ್ಳಬೇಕು? ತನ್ನ ಪಕ್ಕದಲ್ಲಿದ್ದವರ ಸಹಾಯ ಪಡೆದು ಆತ ನನ್ನ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಿಕೊಟ್ಟ.

ನಂತರ ಒಂದೆರಡು ಬಾರಿ ಬ್ಯಾಂಕಿಗೆ ಹೋದಾಗ ಆತ ವಿನಾಕಾರಣ ಮುಗುಳ್ನಕ್ಕಿದ್ದ. ಎತ್ತರದ ಮೈಕಟ್ಟು, ದುಂಡು ಮುಖ, ಕುರುಚಲು ಗಡ್ಡ, ನೀಟಾಗಿ ಡ್ರೆಸ್ ಮಾಡಿದ ಶೈಲಿ, ಹೊಳಪು ಕಣ್ಣು... ಆತನಲ್ಲಿ ಏನೋ ಆಕರ್ಷಣೆಯಿದೆ ಎನ್ನಿಸಿತು. ಆದರೆ ನನಗೇಕೆ?

ಅದೊಂದು ದಿನ ಕ್ಯಾಂಟೀನ್ ಬಳಿ ಸಿಕ್ಕಿದ್ದ. ಕಷ್ಟಪಟ್ಟು ಕನ್ನಡದಲ್ಲಿ, ''ನಿಮ್ಮ ಹೆಸರು?...'' ಕೇಳಿದ್ದ.

''ನಿಮಗ್ಯಾಕೆ?'' ಎಂದಿದ್ದೆ. ಗೆಳತಿ ರಮಣಿ ನನ್ನನ್ನು ಗದರಿಸಿದ್ದಳು. ಅವಮಾನ ಮಾಡಬಾರದು ಎಂದು ನನಗೆ ಬುದ್ಧಿ ಹೇಳಿದ್ದಳು. ನನ್ನನ್ನು ಆತ ಪ್ರೀತಿಸುತ್ತಿರಬಹುದು ಎಂದು ಸೂಚನೆ ನೀಡಿದ್ದಳು.

ಮುಂದಿನ ಕೆಲವು ದಿನಗಳಲ್ಲಿ ನನ್ನ ಬಗ್ಗೆ ಆತ ಕೆಲವು ಮಾಹಿತಿಗಳನ್ನು ಕಲೆಹಾಕಿದ್ದ. ಅದೊಂದು ದಿನ ಆತನೇ ಹೇಳಿದ್ದ, ''ಒಂದು ಎಂ.ಎ. ಮುಗಿದರೇನಂತೆ! ಮತ್ತೊಂದು ಎಂ.ಎ. ಮಾಡಿ, ಇಂಗ್ಲಿಷ್‌ನಲ್ಲಿ...'' ಸಲಹೆ ನೀಡಿದ್ದ.

ಮಾತುಮಾತಿಗೂ ಬಯ್ಯುತ್ತಿದ್ದ ಅಪ್ಪ ಹಾಗೂ ಪ್ರೀತಿಯಿಂದ ಮಾತನಾಡಲು ಬಯಸುತ್ತಿದ್ದ ಈತನ ನಡುವೆ ತುಲನೆ ನಡೆಸಿತ್ತು ಮನಸ್ಸು. ಈತನೇ ಗೆದ್ದಿದ್ದ. ನಾನು ಇಂಗ್ಲಿಷ್‌ನಲ್ಲಿ ಎಂ.ಎ. ಮಾಡಲು ಅಪ್ಲಿಕೇಷನ್ ಹಾಕಿದ್ದೆ. ಆತನೂ ನನ್ನ ಕೈ ಕುಲುಕಿದ್ದ. ಯಾಕೋ ಏನೋ ಆತ ದೂರದವನು ಎನ್ನಿಸಲಿಲ್ಲ.

ಮುಂದಿನ ಎರಡು ವರ್ಷಗಳಲ್ಲಿ ಏನೆಲ್ಲಾ ಬದಲಾವಣೆ!

ಈ ದಿನ ನನಗೆ ಕೊನೆಯ ಪರೀಕ್ಷೆ. ಬರೆದುಬಿಟ್ಟರೆ...

★★★

ಅಂದು ಭಾನುವಾರ. ಸುಮಾರು ಹತ್ತು ಗಂಟೆಯ ಹೊತ್ತಿಗೆ ನಾನು ರೀಟಾಳ ಬಳಿಗೆ ಹೋಗಿದ್ದೆ. ಬಿಡುವಾಗಿದ್ದಳು. ತರಕಾರಿಗಳನ್ನು ಆರಿಸಿ, ಚೀಲಕ್ಕೆ ತುಂಬಿಕೊಂಡ ನಂತರ ಆಕೆಗೆ ಚಹಾ ಕುಡಿಸೋಣ ಎನ್ನಿಸಿತು. ಆಕೆಯೂ ನನ್ನೊಂದಿಗೆ ಹೆಜ್ಜೆ ಹಾಕಿದಳು. ನಡೆಯುತ್ತಲೇ ಪ್ರಶ್ನಿಸಿದೆ,